ಹೋಗಿ ನೀವು ಸ್ಟಾಲ್ ಹಾಕಬಹುದಲ್ಲ. ನೀವು ಅವರ ಎಚ್.ಆರ್. ವಿಭಾಗದವರನ್ನು ಸಂಪರ್ಕಿಸಿದರೆ, ಪ್ರತಿಯೊಂದು ಹಬ್ಬ ಹಾಗೂ ಇನ್ನಿತರ ಕಾರ್ಯಕ್ರಮದ ಸಮಯದಲ್ಲಿ ಅಲ್ಲಿ ಸ್ಟಾಲ್ ಹಾಕಬಹುದು' ಎಂದು ಸಲಹೆ ನೀಡಿದರು. ನಂತರ ಅವರೇ ಭಾವೇಶ್‌ಗೆ ಅನೇಕ ಕಂಪನಿಗಳ ಎಚ್.ಆರ್. ವಿಭಾಗದ ಫೋನ್ ನಂಬರ್ ಕೊಟ್ಟರು. ಪ್ರಸಾದ್ ಅವರ ಮೂಲಕ ಭಾವೇಶ್ ಅವರಿಗೆ ಇನ್ಫೋಸಿಸ್ ಕಂಪನಿಯ ಉದ್ಯೋಗಿಗಳ ಪರಿಚಯವಾಗಿತ್ತು.

ಇದೇ ರೀತಿ ಗ್ರಾಹಕರೊಡನೆ ಭಾವೇಶ್ ಅವರ ಸ್ನೇಹ ಕೊಂಡಿಯಾದಂತೆ, ಸಂಬಂಧಗಳು ಒಂದಕ್ಕೊಂದು ಕೂಡಿ ಸರಪಳಿಯಾದಂತೆ, ಮುಂದಿನ ವರ್ಷಗಳಲ್ಲಿ ನೀರಜ್ ಚಂದನ್ ಮತ್ತು ಅವರ ಪತ್ನಿಯ ಪರಿಚಯವೂ ಭಾವೇಶ್ ಅವರಿಗೆ ಆಗಲಿತ್ತು. ಅವರಿಗೆ ಭಾವೇಶ್ ತಮ್ಮ ವಿಸಿಟಿಂಗ್ ಕಾರ್ಡ್ ನೀಡಿದ್ದರು. ತಕ್ಷಣ ಅವರು, 'ಅರೆ ನಿಮ್ಮ ವೆಬ್‌ಸೈಟ್‌ನ ವಿಳಾಸ ಇಲ್ಲಿ ಏಕೆ ಇಲ್ಲ?' ಎಂದು ಕೇಳಿದರು. ಆಗ ಭಾವೇಶ್ ಸಂಕೋಚವಿಲ್ಲದೆ ಅವರಿಗೆ ಹೇಳಿದರು – ವೆಬ್‌ಸೈಟ್ ಸೃಷ್ಟಿಸಲು ತಮ್ಮಲ್ಲಿ ಹಣವಿಲ್ಲ ಎಂದು. ಆಗ ನೀರಜ್ ಅವರು, 'ಸೋಷಿಯಲ್ ಮೀಡಿಯಾ ನಿಮ್ಮ ಈ ಮೋಂಬತ್ತಿಗಳನ್ನು ಇಡೀ ವಿಶ್ವದೊಡನೆ ಜೋಡಿಸಬಲ್ಲದು' ಎಂದು ವಿವರಿಸಿದರು. ನೀರಜ್ ಅವರು ಸ್ವಯಂ ಓರ್ವ 'ವೆಬ್ ವಿನ್ಯಾಸಕ'ರಾಗಿದ್ದರು. ಅವರು ಭಾವೇಶ್ ಅವರ ಪ್ರತಿಯೊಂದು ವಿನ್ಯಾಸದ ಮೋಂಬತ್ತಿಗಳ ಫೋಟೋ ತೆಗೆದುಕೊಂಡರು. ಮರುದಿನ ಮನೆಗೇ ಬಂದು ಮತ್ತಷ್ಟು ವಿಷಯಗಳನ್ನು ಸಂಗ್ರಹಿಸಿದರು. ಒಂದು ವಾರ, ಹತ್ತು ದಿನಗಳಲ್ಲಿ 'ಸನ್‌ರೈಸ್ ಕ್ಯಾಂಡಲ್.ಇನ್' (sunrise candle.in) ವೆಬ್‌ಸೈಟ್ ಸಿದ್ಧವಾಗಿತ್ತು! ಅವರಿಗೆ ಹಣವನ್ನು ನೀಡಲು ಭಾವೇಶ್ ಬಯಸಿದಾಗ, 'ನಾನು ಸ್ನೇಹಿತರಿಂದ ಹಣ ತೆಗೆದುಕೊಳ್ಳುವುದಿಲ್ಲ' ಎಂದು ನಿರಾಕರಿಸಿಬಿಟ್ಟರು. ಮುಂದುವರೆದು, 'ಇದು ನನ್ನನ್ನು ಮತ್ತು ನನ್ನ ಪರಿವಾರವನ್ನು ನಿಮ್ಮ ಮತ್ತು ನಿಮ್ಮ ಸನ್‌ರೈಸ್ ಕ್ಯಾಂಡಲ್ಸ್ ಜೊತೆಯಲ್ಲಿ ಬದುಕಿನುದ್ದಕ್ಕೂ ಜೋಡಿಸಿಡುವ ಮಾಧ್ಯಮ' ಎಂದರು.

ಪ್ರಸಾದ್ ಅವರಿಗಾಗಲಿ, ನೀರಜ್ ಅವರಿಗಾಗಲಿ ಬೀದಿಯಲ್ಲಿ ಮೋಂಬತ್ತಿ ಮಾರುತ್ತಿರುವ ಓರ್ವ ಸಾಮಾನ್ಯ ವ್ಯಾಪಾರಿಗಾಗಿ ಇಷ್ಟೆಲ್ಲ ತೊಂದರೆ ತೆಗೆದುಕೊಳ್ಳುವ ಅಗತ್ಯವಾದರೂ ಏನಿತ್ತು? ಆದರೆ ಭಾವೇಶ್ 'ಸಾಮಾನ್ಯ' ವ್ಯಾಪಾರಿಯಾಗಿರಲಿಲ್ಲ. ಭಾವೇಶ್ ಅವರ ಬಳಿ ಅವರಿಗೆ ನೀಡಲು ಮೋಂಬತ್ತಿಯಾಚೆಗೂ ಬಹಳಷ್ಟಿತ್ತು. ಅವರ ಸ್ನೇಹದ ನಡವಳಿಕೆ ಮತ್ತು ಆತ್ಮೀಯ ವ್ಯವಹಾರ. ಈ ಇಬ್ಬರೂ ಮಹಾಬಲೇಶ್ವರಕ್ಕೆ ಪ್ರವಾಸಿಗರಾಗಿ ಬಂದವರು. ಮಾರ್ಕೆಟ್‌ನಲ್ಲಿ ಅಲೆದಾಡುತ್ತಾ ಮೋಂಬತ್ತಿ ಕೊಂಡು ಹೊರಟುಹೋಗಬಹುದಿತ್ತು. ಕೇವಲ ಕೆಲವು ದಿನಗಳ ಅತಿಥಿಗಳು, ಆದರೆ ಬದುಕಿನುದ್ದದ ಸಂಗಾತಿಗಳಾದರು.

ಉಡುಗೊರೆ ಕೊಡುವುದು ತೆಗೆದುಕೊಳ್ಳುವುದು ದೊಡ್ಡ ವಿಷಯವಲ್ಲ. ಆದರೆ ಅದರ ಹಿಂದಿನ ಮನಸ್ಸು ನಿರ್ಮಲವಾಗಿರಬೇಕು. ಹೀಗೆಯೇ ಅನೇಕ ಒಳ್ಳೆಯ ಗೆಳೆಯರು ಭಾವೇಶ್ ಅವರೊಡನೆ ಕೈ ಜೋಡಿಸಲಿದ್ದರು. ಅವರೆಲ್ಲರೂ ತಮ್ಮದೇ ರೀತಿಯಲ್ಲಿ ಭಾವೇಶ್ ಅವರಿಗೆ ಸಹಾಯ ಮಾಡಿದರು. 'ಸನ್‌ರೈಸ್ ಕ್ಯಾಂಡಲ್ಸ್' ಇವರೆಲ್ಲರ ಸಹಾಯದಲ್ಲಿ ಉಜ್ವಲವಾಗಿ ಬೆಳಗಲಿತ್ತು. ಭಾವೇಶ್ ಅವರು ಆಗಲೇ ಇನ್ಫೋಸಿಸ್‌ನ ಬಹಳಷ್ಟು ಜನರ ಸ್ನೇಹವನ್ನು ಪಡೆದಿದ್ದರು. ಆ ಜನರು, ಮಹಾಬಲೇಶ್ವರಕ್ಕೆ ಕುಟುಂಬದೊಡನೆ, ಗೆಳೆಯರೊಡನೆ, ಸಂಬಂಧಿಕರೊಡನೆ ಬಂದಾಗಲೆಲ್ಲ ಸ್ಟಾಲ್‌ಗೆ ಬರುತ್ತಿದ್ದರು. ಅವರು ನೆನಪಿಟ್ಟು ಬಂದು ಮಾತನಾಡಿಸಿಕೊಂಡು ಹೋಗುವುದು ಭಾವೇಶ್‌ಗೆ ಮುಖ್ಯವಿತ್ತು. ಅವರಿಂದ ದೊರೆತ ವ್ಯಾಪಾರ ಬೋನಸ್ ಆಗಿತ್ತು.

ಅಧ್ಯಾಯ 10

## ಪೇಟೆಯಲ್ಲಿ ಭೆಟ್ಟಿಯಾದ ಪ್ರೇಮಚಂದ್ರಮ

ಭಾವೇಶ್ ಮಹಾಬಲೇಶ್ವರದ ಮಾರುಕಟ್ಟೆಯಲ್ಲಿ ದೃಢವಾಗಿ ಕಾಲೂರಿದ್ದರು. ಆ ಕೈಗಾಡಿ ಹಿಂದೆ ನಿಂತು ಜಗತ್ತನ್ನು ನೋಡಿದ್ದರು. ಅಲ್ಲಿ ನಿಂತಂತೆ, ಅವರಿಗೆ ಜಗವೆಂಬ ಬಜಾರಿನ ವಿಶ್ವರೂಪ ದರ್ಶನವಾಗಿತ್ತು. ತನ್ನಂತಹ ಅಂಧರಿಗೆ ಜೀವನೋಪಾಯದ ಮಾರ್ಗ ತೋರಬೇಕೆಂಬ ಅವರ ಬದುಕಿನ ಲಕ್ಷ್ಯವಿನ್ನೂ ದೂರವಿತ್ತು. ಸದ್ಯಕ್ಕೆ ತಮ್ಮ ಬದುಕನ್ನು ಹಳಿಗೆ ತರಬೇಕಿತ್ತು. ಅಮ್ಮನ ಚಿಕಿತ್ಸೆಗೆ ಮಾಡಿದ ಸಾಲದ ಹೊರೆಯನ್ನು ಹೆಗಲಿಂದ, ಎದೆಯಿಂದ ಇಳಿಸಬೇಕಿತ್ತು. ತಮ್ಮ ಉದ್ಯಮವನ್ನು ಹಿಗ್ಗಿಸಬೇಕಿತ್ತು. ತಾನು ಬದುಕಿ, ಇತರರನ್ನೂ ಬದುಕಲು ಬಿಡುವ, ಬದುಕಿಸಲು ಪ್ರಯತ್ನಿಸುವ ಜೀವನ ವ್ಯಾಪಾರ ಅವರದಾಗಿತ್ತು.

ಅವರು ಮೋಂಬತ್ತಿ ತಯಾರಿಸಿ ವ್ಯಾಪಾರ ಮಾಡುತ್ತಾ ಜೀವನವನ್ನು ಪುನರಾರಂಭಿಸಿ ಹೆಚ್ಚು ತಿಂಗಳುಗಳೇನೂ ಆಗಿರಲಿಲ್ಲ. ಹೀಗೊಂದು ದಿನ ತಳ್ಳುಗಾಡಿಯ ಹಿಂದೆ ಮಾರುಕಟ್ಟೆಯಲ್ಲಿ ನಿಂತಂತೆ, 'ಹಾಯ್, ಹಲೋ, ಇಲ್ಲಿ ಕೇಳು, ಈ ಮೋಂಬತ್ತಿಗೆ ಎಷ್ಟು ಬೆಲೆ?' – ಒಂದು ಸಿಹಿಯಾದ ಆದರೆ ಜೊತೆಗೇ ರೋಫು ಹಾಕಿದ ದನಿ ಭಾವೇಶ್ ಅವರ ಕಿವಿಯ ಮೇಲೆ ಬಿದ್ದಿತು. ಎದುರಿಗೆ ನಿಂತ ಹುಡುಗಿ ಒಬ್ಬಳೇ ಬಂದಿದ್ದಾಳೆ ಎಂದು ಕೂಡಾ ಭಾವೇಶ್ ಅವರಿಗೆ ಅಂದಾಜಾಯಿತು. ಆ ನಾಲ್ಕು ಅಡಿ ಉದ್ದ, ಮೂರು ಅಡಿ ಅಗಲದ ತೆರೆದ ಕೈಗಾಡಿಯಲ್ಲಿ ಮೋಂಬತ್ತಿ ಮಾರುತ್ತಾ ನಿಂತಂತೆ, ಅವರಿಗೆ ಗ್ರಾಹಕರ ಮನಃಸ್ಥಿತಿಯನ್ನು, ಅವರ ವಯಸ್ಸನ್ನು, ಒಂದಿಷ್ಟು ಅವರ ಹಿನ್ನೆಲೆಯನ್ನು ಅಂದಾಜು ಮಾಡುವಷ್ಟು ಅನುಭವ ಲಭಿಸಿತ್ತು. ಮಾತಿನ ಧಾಟಿಯಿಂದ, ದನಿಯಲ್ಲಿರುವ ಗರ್ವ, ದೈನ್ಯ, ವಿನಯ ಇವುಗಳಿಂದ ಎದುರು ನಿಂತ ವ್ಯಕ್ತಿಯ ಬಗ್ಗೆ ಸರಿಯಾಗಿಯೇ ಅಂದಾಜು ಮಾಡುವಷ್ಟು ಕೌಶಲವನ್ನು ಭಾವೇಶ್ ಪಡೆದಿದ್ದರು.

ಅರೆಕ್ಷಣದಲ್ಲಿಯೇ ಭಾವೇಶ್ ಅವರಿಗೆ ಅಂದಾಜಾಯಿತು, ಈ ಯುವತಿಗೆ ಇಪ್ಪತ್ತರ ಮೇಲಿನ ವಯಸ್ಸು. ಸ್ವರದಲ್ಲಿದ್ದ ರೋಫು ನೋಡಿ, ಈಕೆ ಸ್ಥಿತಿವಂತ ಕುಟುಂಬದಿಂದ ಬಂದಿರಬೇಕು ಎಂದೂ ಅನಿಸಿತು. ಸಾಧಾರಣ ವ್ಯಕ್ತಿಗಳು ತಮ್ಮ ಕಣ್ಣಿನಿಂದ ನೋಡಿ ಎದುರಿಗೆ ಇರುವವರನ್ನು ಅಂದಾಜು ಮಾಡುತ್ತಾರೆ. ಭಾವೇಶ್ ಅವರು ತಮ್ಮ ಶ್ರವಣ ಶಕ್ತಿಯಿಂದಲೇ ಎದುರಿಗೆ ನಿಂತವರ ಹಿನ್ನೆಲೆಯನ್ನು ಗ್ರಹಿಸುತ್ತಿದ್ದರು. ಅಗತ್ಯವೇ ಅವರಿಗೆ ಈ ಕಲೆಯನ್ನು ಕಲಿಸಿತ್ತು.

ಆ ಸಿಹಿಯಾದ ಸ್ವರಕ್ಕೆ ತಕ್ಷಣ ಭಾವೇಶ್ ಉತ್ತರಿಸಿದರು 'ಜೀ ಮೇಡಂ, ನಿಮಗೆ ಯಾವ ಮೋಂಬತ್ತಿ ಬೇಕಿದೆ? ಇಲ್ಲಿ ನೋಡಿ, ಈ ಹೂವಿನ ಆಕಾರದ ಮೋಂಬತ್ತಿಗಳು ಎಷ್ಟಿವೆಯೋ, ಅವೆಲ್ಲವೂ ನೀರಿನಲ್ಲಿ ತೇಲುತ್ತವೆ. ಹುಟ್ಟಿದ ಹಬ್ಬದ ಮೋಂಬತ್ತಿಗಳಿವೆ, ಸುರುಳಿ ಆಕಾರದ ಮೋಂಬತ್ತಿಗಳಿವೆ, ಮೇಜಿನ ಮೇಲೆ ಇಡುವ ಟೇಬಲ್ ಕ್ಯಾಂಡಲ್ಸ್ ಜೊತೆಗೆ ಜೆಲ್ ಕ್ಯಾಂಡಲ್ಸ್ ಕೂಡಾ ಇವೆ'. ಅವರ ಸ್ವರದಲ್ಲಿ ಎಷ್ಟು ಸಾಧ್ಯವೋ ಅಷ್ಟು ಸಿಹಿಯಿತ್ತು, ನಮ್ರತೆಯಿತ್ತು. ತಮ್ಮ ಮೋಂಬತ್ತಿಗಳ ಗುಣ ವಿಶೇಷಗಳ ಬಗ್ಗೆ ಎದುರು ನಿಂತ ಈ ಗ್ರಾಹಕಿಗೆ ವಿವರಿಸತೊಡಗಿದರು.

'ನೋಡಿ ಮೇಡಂ, ಇವೆಲ್ಲ ಮೋಂಬತ್ತಿಗಳು ಹೊಗೆಯಿಲ್ಲದವು. ಪರಿಸರಕ್ಕೆ ಹಾನಿ ಮಾಡುವುದಿಲ್ಲ. ಅಷ್ಟೇ ಅಲ್ಲದೆ, ಇವು ಹೆಚ್ಚು ಹೊತ್ತು ಉರಿಯುವ ಮೋಂಬತ್ತಿಗಳು' ಎಂದರು.

ಮೋಂಬತ್ತಿಗಳನ್ನು ಆಕೆ ಮುಟ್ಟುತ್ತಿರುವ, ಎತ್ತಿ ನೋಡುತ್ತಿರುವ ಸದ್ದು ಕೇಳಿಸಿತು.

'ಎಲ್ಲಿಂದ ತರ್ತಿಯಾ ಈ ಎಲ್ಲ ಮೋಂಬತ್ತಿ?' ಆಕೆ ಪ್ರಶ್ನಿಸಿದಳು.

'ಎಲ್ಲಿಂದಲೂ ತಂದದ್ದಲ್ಲ. ಇವೆಲ್ಲವನ್ನೂ ನಾನು ಸ್ವತಃ ಮಾಡಿದ್ದೇನೆ ಮೇಡಂ. ಇಲ್ಲಿಂದ ಒಂದು ಕಿಲೋಮೀಟರ್ ದೂರದಲ್ಲಿ ನನ್ನ ವಾಸ. ಅಲ್ಲೇ ಬೆಳಗಿನಿಂದ ಸಂಜೆಯವರೆಗೂ ಈ ಮೋಂಬತ್ತಿಗಳನ್ನು ತಯಾರಿಸಿ, ಸಂಜೆ ಇಲ್ಲಿಗೆ ಬಂದು ಸ್ಟಾಲ್ ಹಾಕುತ್ತೇನೆ' ಎಂದು ಉತ್ತರಿಸಿದರು.

ಆಕೆ ಚಕಿತಳಾಗಿ ಕೇಳಿದಳು 'ಇವೆಲ್ಲ ನೀನು ತಯಾರಿಸಿದ್ದೆ? ಅದು ಹೇಗೆ ಸಾಧ್ಯ? ನಿನಗೆ ಕಣ್ಣೇ ಕಾಣುವುದಿಲ್ಲ. ಓರ್ವ ಅಂಧ ವ್ಯಕ್ತಿ ಇಷ್ಟು ಸುಂದರವಾದ ಮೋಂಬತ್ತಿಗಳನ್ನು ಮಾಡಲು ಹೇಗೆ ಸಾಧ್ಯ?'

ಮತ್ತೆ ಅತ್ಯಂತ ಸಹನೆಯಿಂದ ಭಾವೇಶ್ ಉತ್ತರ ಕೊಟ್ಟರು. 'ಮೇಡಂ, ದೇವರು ನನಗೆ ಎರಡು ಕಣ್ಣುಗಳನ್ನು ಕೊಡಲಿಲ್ಲ ನಿಜ. ಆದರೆ ನನ್ನ ಕೈಗಳಲ್ಲಿ ಬೆರಳಿನ ರೂಪದಲ್ಲಿ ಐದು ಮತ್ತು ಐದು, ಒಟ್ಟು ಹತ್ತು ಕಣ್ಣುಗಳಿವೆ. ಇವೇ ಹತ್ತು ಕಣ್ಣುಗಳ ಸಹಾಯದಿಂದ ನಾನು ವಿವಿಧ ಆಕಾರಪ್ರಕಾರಗಳ ಮೋಂಬತ್ತಿಗಳನ್ನು ತಯಾರಿಸುತ್ತೇನೆ'.

ಆಕೆಗೆ ಸಮಾಧಾನವಾಗಲಿಲ್ಲ. ಮತ್ತಷ್ಟು ಪ್ರಶ್ನೆಗಳು.

'ಅಲ್ಲ, ಇಲ್ಲಿ ಬೇರೆ ಬೇರೆ ಬಣ್ಣಗಳ ಉಪಯೋಗವಾಗಿದೆ. ಅದನ್ನು ಕಣ್ಣು ಕಾಣುವವರು ಮಾತ್ರ ಮಾಡಲು ಸಾಧ್ಯ' – ಬಾಣದಂತೆ ಮರು ಪ್ರಶ್ನೆ ಭಾವೇಶ್ ಅವರತ್ತ ಹಾಯ್ದಿತ್ತು.

'ನೀವು ಬ್ರೈಲ್ ಲಿಪಿಯ ಬಗ್ಗೆ ಕೇಳಿದ್ದೀರಾ?'